ತಜ್ಞರು. ಮೊದಲನೆಯದಾಗಿ ಶುದ್ಧವಾದ ಅರಾರೂಟ್ ಪೌಡರು ತೆಗೆದುಕೊಳ್ಳಿ. ಮುಖದ ತ್ವಚೆ ಬೆಳ್ಳಗಿದ್ದರೆ ಒಂದು ಚಮಚ ಸಾಕು. ಕಪ್ಪಗಿದ್ದರೆ ಹೆಚ್ಚಿನ ಕಾಂತಿಗಾಗಿ ಎರಡು ಚಮಚಗಳಿರಲಿ. ಇದಕ್ಕೆ ಒಂದು ಚಮಚ ಕೋಕೊ ಪುಡಿ, ಒಂದು ಚಮಚ ದಾಲ್ಚೀನಿ ಅಥವಾ ಜಾಯಿಕಾಯಿಯ ಪುಡಿ ಬೆರೆಸಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣಕ್ಕೆ ಜೊಜೊಬಾ, ಅಲಿವ್, ಬಾದಾಮಿ ತೈಲಗಳ ಪೈಕಿ ಯಾವುದಾದರೂ ಒಂದನ್ನು ಕೆಲವು ಹನಿ ಹಾಕಿ ಬೆರೆಸಿಕೊಳ್ಳಿ. ಇಲ್ಲಿಗೆ ನಿಮ್ಮ ಆರೋಗ್ಯಕರ ಪೌಡರು ಸಿದ್ಧವಾದಂತೆಯೇ.

ಎರಡನೆಯದಾಗಿ ಅಕ್ಕಿ ಹಿಟ್ಟು ಒಂದು ಚಮಚ, ಕೋಕೋ ಪೌಡರು ಒಂದು ಚಮಚ, ಅರ್ಧ ಚಮಚ ಅಡುಗೆಗೆ ಬಳಸುವ ಬೇಕಿಂಗ್ ಸೋಡಾ, ಅರ್ಧ ಚಮಚ ದಾಲ್ಚೀನಿ ಪೌಡರ್, ಪರಿಮಳಕ್ಕಾಗಿ ಗುಲಾಬಿ, ಶ್ರೀಗಂಧ ಅಥವಾ ಲ್ಯಾವೆಂಡರ್ ಪುಡಿ ಅಥವಾ ತೈಲ ಸೇರಿಸಿ. ಇಷ್ಟರ ಮಿಶ್ರಣವೇ ಸುಗಂಧಿತ ಫೇಸ್ ಪೌಡರು ಆಗಿ ಬಳಕೆಗೆ ಯೋಗ್ಯವಾಗುತ್ತದೆ. ಇದರಲ್ಲಿರುವ ದಾಲ್ಚೀನಿ ಹುಡಿ ನಂಜು ನಿರೋಧಕವಾಗಿದ್ದು ಚರ್ಮವನ್ನು ರಕ್ಷಿಸುತ್ತದೆ, ಮೊಡವೆಗಳನ್ನು ತಡೆಯುತ್ತದೆ. ಹಾಗೆಯೇ ಅಡುಗೆ ಸೋಡಾ ಬೆವರಿನ ವಾಸನೆ ದೂರವಿಡುತ್ತದೆ.



## ವಿವಿಧ ಉಪಯೋಗಗಳು

ನೀವೇ ತಯಾರಿಸಿದ ಈ ಪೌಡರ್ ಕೇವಲ ಮುಖ ಸೌಂದರ್ಯದ ರಕ್ಷಕನಷ್ಟೇ ಅಲ್ಲ, ಅದರಿಂದ ಹಲವಾರು ಉಪಯೋಗಗಳಿವೆ. ಬೇಕಾದಾಗ ಅದನ್ನೂ ಮಾಡಿಕೊಳ್ಳಬಹುದು.

ನಿಮ್ಮ ತ್ವಚೆ ಒಣ ಪ್ರಕೃತಿಯದಾಗಿದ್ದರೆ ಪಾದ, ಮೊಣಕೈ ಸೇರಿದಂತೆ ಎಲ್ಲ ಭಾಗದ ತ್ವಚೆಯನ್ನೂ ತೇವಯುಕ್ತವಾಗಿಟ್ಟು ಮೃದುಗೊಳಿಸಲು ಅಲ್ಲಿಗೆ ಇದನ್ನು ಚಿಮುಕಿಸಿಕೊಳ್ಳಬಹುದು. ತ್ವಚೆಯಲ್ಲಿ ಒರಟಾದ ತೇಪೆಗಳಿದ್ದರೆ ನಿವಾರಿಸಿ ಚಳಿಗಾಲ ಮತ್ತು ಬೇಸಗೆಯಲ್ಲಿ ಉಂಟಾಗುವ ಕಿರಿಕಿರಿಗಳಿಂದ ಮುಕ್ತವಾಗಲು ಈ ಪೌಡರ್ ಸಹಕರಿಸುತ್ತದೆ. ಹಾಗೆಯೇ ಬೆವರಿನ ವಾಸನೆ ತೊಡೆಯಲು ಡಿಯೋಡರೆಂಟ್ ಆಗಿ ಇದನ್ನೇ ಚಿಮುಕಿಸಿ ಕೊಳ್ಳುವುದರಿಂದ ಉತ್ತಮ ಫಲಿತಾಂಶವು ಸಿಗುತ್ತದೆ.

ಮುಖಕ್ಕೆ ಮೇಕಪ್ ಮಾಡಿಕೊಂಡ ಬಳಿಕ ಈ ಪೌಡರ್ ಚಿಮುಕಿಸಿ ಕೊಳ್ಳುವುದರಿಂದ ಮೇಕಪ್ ಬಹು ಸಮಯ ಮಾಸದೆ ಉಳಿಯುತ್ತದೆ. ರಾತ್ರಿ ಮಲಗುವಾಗಲೂ ಈ ಕ್ರಮ ಅನುಸರಿಸಿದರೆ ಮೇಕಪ್ ಕೆಡುವುದಿಲ್ಲ. ಮುಖದಲ್ಲಿ ಅನಗತ್ಯ ತೈಲಾಂಶವಿದ್ದರೂ ತೊಡೆಯಲು ಇದು ಸಹಕರಿಸುತ್ತದೆ.

ಪುರುಷರಿಗೂ, ಕ್ಷೌರ ಮಾಡಿಕೊಂಡ ಬಳಿಕ ಮನೆಯಲ್ಲಿ ತಯಾರಿಸಿದ ಈ ಪೌಡರನ್ನು ಆ ಭಾಗಕ್ಕೆ ಸಿಂಪಡಿಸುವ ಮೂಲಕ ಸೂಕ್ಷ್ಮವಾದ ತ್ವಚೆಯನ್ನು ಕಾಡುವ ಉರಿ, ನೋವು ಏನಿದ್ದರೂ ಉಪಶಮನವಾಗುತ್ತದೆ.

ಅನಗತ್ಯ ಕೂದಲುಗಳನ್ನು ವ್ಯಾಕ್ಸಿಂಗ್ ಮೂಲಕ ತೆಗೆಯುವುದಾದರೆ ಮೊದಲು ಈ ಪೌಡರನ್ನು ಕೂದಲುಗಳ ಮೇಲೆ ಸಿಂಪಡಿಸಿಕೊಳ್ಳುವುದು ಸೂಕ್ತ. ಅದು ಕೂದಲುಗಳಿಗೆ ಅಂಟಿಕೊಂಡು ಚರ್ಮದ ತೇವಾಂಶವನ್ನು ಹೀರಿಕೊಂಡು ಮೃದುಗೊಳಿಸುತ್ತದೆ. ನೋವುರಹಿತವಾಗಿ ಕೂದಲುಗಳನ್ನು ಕೀಳಲು ಸಹಾಯ ಮಾಡುತ್ತದೆ. ಕೂದಲು ಕಿತ್ತ ಭಾಗದ ತ್ವಚೆ ಕೆಂಪಾಗುವುದನ್ನು ದೂರ ಮಾಡುತ್ತದೆ.

ಬೇಸಗೆಯಲ್ಲಿ ತೊಡೆಯ ಸಂದುಗಳು ಬೆವರುತ್ತವೆ. ನಡೆಯುವಾಗ ಸಂಭವಿಸುವ ತಿಕ್ಕಾಟದ ಪರಿಣಾಮ ಅಲ್ಲಿ ತುರಿಕೆ, ಕೆಲವು ತ್ವಚೆಯ ರೋಗಗಳು ಕಾಣಿಸಿಕೊಳ್ಳುತ್ತವೆ. ಮನೆಯ ಪೌಡರನ್ನು ತೊಡೆಯ ಸಂದುಗಳಿಗೆ ಚಿಮುಕಿಸಿಕೊಂಡು ನಿರ್ಭಯವಾಗಿ ಹೊರಗೆ ಹೋಗಬಹುದು, ತ್ವಚೆ ಘರ್ಷಣೆಯಿಂದ ಹಾನಿಗೊಳಗಾಗುವುದು ಇಲ್ಲವೇ ಇಲ್ಲ.

ಇದೇ ಪೌಡರನ್ನು ಕಲಸಿ ತಲೆಗೂದಲಿಗೆ ಶಾಂಪೂ ಆಗಿ ಬಳಸಿ ನಿರಾಳವಾಗಿ ಸ್ನಾನ ಮಾಡಿ. ಕೂದಲು ಹೊಳೆಯುತ್ತದೆ, ಘಮಘಮ ಸುವಾಸಿತವಾಗುತ್ತದೆ. ತಲೆಹೊಟ್ಟಿನಂತಹ ಸಮಸ್ಯೆ ಪರಿಹಾರವಾಗುತ್ತದೆ ಮಾತ್ರವಲ್ಲ, ಕೂದಲಿನಲ್ಲಿರುವ ಜಿಡ್ಡಿನ ಅಂಶ ತೊಲಗಿ ಶುಚಿಯಾಗುತ್ತದೆ.

ಮಲಗುವ ಮೊದಲು ಹಾಸಿಗೆ ಮತ್ತು ದಿಂಬಿನ ಮೇಲೆ ಈ ನೈಸರ್ಗಿಕ ಪೌಡರನ್ನು ಸಿಂಪಡಿಸಿಕೊಳ್ಳಿ. ಅದರ ಸುಮಧುರ ಪರಿಮಳದಿಂದ ಸುಖ ನಿದ್ರೆಗೆ ಸುಲಭವಾಗಿ ಜಾರುತ್ತೀರಿ.

ಅಡುಗೆ ಮತ್ತಿತರ ಕೆಲಸ ಮಾಡುವಾಗ ಹಲವರು ರಬ್ಬರಿನ ಕೈಗವಸುಗಳನ್ನು ಬಳಸುವ ಪದ್ಧತಿಯಿದೆ. ಇದರಿಂದ ಕೈಗಳು ರಬ್ಬರ್ ವಾಸನೆ ಬರುತ್ತವೆ. ಈ ಮುಜುಗರವನ್ನು ತಡೆಯಲು ಬಳಸುವ ಮುನ್ನ ಕೈಗವಸಿನೊಳಗೆ ಇದೇ ಪೌಡರಿನ ಕಣಗಳನ್ನು ಉದುರಿಸಿಕೊಂಡರೆ ವಾಸನೆಯಿಂದ ಪಾರಾಗಬಹುದು.

ಅಡುಗೆಮನೆಯ ವಾರ್ಡ್‌ರೋಬ್‌ಗಳಲ್ಲಿ ಅನಪೇಕ್ಷಿತ ವಾಸನೆ ಬರುವುದನ್ನು ತಡೆಯಲು ಆಗಾಗ ನೀವೇ ತಯಾರಿಸಿದ ಪೌಡರ್ ಕಣಗಳನ್ನು ಉದುರಿಸಿ ಸ್ವಲ್ಪ ಹೊತ್ತು ಬಾಗಿಲು ಮುಚ್ಚಿನೋಡಿ.

ಬೂಟುಗಳು ಮತ್ತು ಕಾಲ್ಚೀಲಗಳು ಧರಿಸಿದ ಬಳಿಕ ಕೆಟ್ಟ ವಾಸನೆ ಬೀರಿ ಮನಸ್ಸಿಗೆ ಕಿರಿಕಿರಿಯುಂಟು ಮಾಡುತ್ತವೆ. ಉಪಯೋಗಿಸುವ ಮೊದಲು ಗೃಹ ತಯಾರಿಕೆಯ ಪೌಡರನ್ನು ಬೂಟಿನೊಳಗೆ ಮತ್ತು ಕಾಲ್ಚೀಲದ ಒಳಭಾಗದಲ್ಲಿ ಸ್ವಲ್ಪ ಹಾಕಿಬಿಟ್ಟರೆ ಅದರ ಸುಗಂಧವೇ ನಿಮ್ಮನ್ನು ಸ್ವಾಗತಿಸುತ್ತದೆ.

ಕಾಲೊರೆಸುಗಳು ಕಿರಿ ಕಿರಿ ಎಂಬ ಸದ್ದಿನಿಂದ ಕೀಟಲೆ ಮಾಡುತ್ತಿದ್ದರೆ ಸುಮ್ಮಗಿರಿಸಲು ಕಷ್ಟವಿಲ್ಲ. ಅದರ ಮೇಲೂ ಈ ನಿಮ್ಮ ಪೌಡರ್ ಚಿಮುಕಿಸುವುದೇ ಪರಿಹಾರೋಪಾಯವಾಗಿದೆ.

ಬಟ್ಟೆ ಮೇಲೆ ಗ್ರೀಸ್ ಮತ್ತಿತರ ಅಳಿಸಲಾಗದ ಕಲೆಗಳಾದರೆ ಚಿಂತಿಸಬೇಡಿ. ಕಲೆಗಳು ಮೂಡಿದ ಕೂಡಲೇ ಇದೇ ಪೌಡರನ್ನು ಅಲ್ಲಿಗೆ ಚಿಮುಕಿಸಿ ತಿಕ್ಕಿಬಿಡಿ. ಬಳಿಕ ಒದ್ದೆ ಹತ್ತಿಯಿಂದ ಒತ್ತಿ ಒರೆಸಿದರೆ ಕಲೆ ಮಾಯವಾಗುತ್ತದೆ.

ನೆಕ್ಲೆಸ್ ಮುಂತಾದ ಕೊರಳಿನ ಹಾರಗಳ ಕೊಂಡಿಗೆ ಕೊಂಚ ಈ ಪೌಡರನ್ನು ಚಿಮುಕಿಸಿದರೆ ಕೊಂಡಿಗಳು ಬಿಗಿಯಾಗದೆ ತೆಗೆಯಲು ಸುಲಭವಾಗುತ್ತವೆ. ತುಂಡಾಗುವ ಭಯವಿಲ್ಲ.

ಇರುವೆಗಳು ಮನೆಯೊಳಗೆ ಬಂದು ತೊಂದರೆ ಕೊಡುತ್ತಿದ್ದರೆ ನಿಮ್ಮ ಪೌಡರನ್ನು ಅವುಗಳ ಮೇಲೆ ಸಿಂಪಡಿಸಿದರೆ ಅವು ದೂರ ಓಡಿಹೋಗುತ್ತವೆ. ಕಾಗದ ಪತ್ರದಂತಹ ಅಗತ್ಯ ದಾಖಲೆಗಳು, ರೂಪಾಯಿ ನೋಟಿನ ಮೇಲೆ ಅಕಸ್ಮಾತ್ ನೀರು ಬಿದ್ದರೆ ಚಿಂತಿಸಬೇಡಿ. ನಿಮ್ಮ ಮುಖ ಸೌಂದರ್ಯದ ಈ ಪೌಡರನ್ನು ನೀರು ಬಿದ್ದ ಭಾಗಕ್ಕೆ ಚಿಮುಕಿಸಿ ಒಣಗಲು ಬಿಡಿ.

ಗುಲಾಬಿ ಮತ್ತಿತರ ಹೂಗಳನ್ನು ಕೊಳೆಯದಂತೆ ಕೆಲವು ದಿನ ರಕ್ಷಿಸಿಡಲು ಕೂಡಾ ನಿಮ್ಮ ಈ ಪೌಡರು ಸಹಾಯವಾಗುತ್ತದೆ. ನೀರಿನಲ್ಲಿ ಅದ್ದಿದ ಹೂವಿನ ಮೇಲೆ ಅದನ್ನು ಚಿಮುಕಿಸಿದರೆ ಅದು ಒಣಗುವುದನ್ನು, ಕೊಳೆಯುವುದನ್ನು ತಡೆಯುತ್ತದೆ.

ನೀವೇ ತಯಾರಿಸುವ ಈ ಮನೆಯ ಪೌಡರು ಸೌಂದರ್ಯವನ್ನು ಕಾಪಾಡುತ್ತದೆಯೇ ಹೊರತು, ಅದರಿಂದ ಯಾವುದೇ ಅಡ್ಡ ಪರಿಣಾಮಗಳು ಬಾಧಿಸುವುದಿಲ್ಲ. ಮಕ್ಕಳಿಗೂ ನಾಯಿ, ಬೆಕ್ಕುಗಳಂತಹ ಸಾಕು ಪ್ರಾಣಿಗಳಿಗೂ ಇದನ್ನು ಬಳಸಬಹುದು. ■